# ಶ್ರೀರಾಮಕೃಷ್ಣರ ಅವತಾರ ಕಾರ್ಯ

ಎಸ್. ಆರ್. ರಾಮಸ್ವಾಮಿ

ನವಯುಗಾಚಾರ್ಯರಾದ ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶಗಳ ಪ್ರಭಾವ ಜಗತ್ತಿನಾದ್ಯಂತ ಹೆಚ್ಚುತ್ತ ಹೋಗುತ್ತಿದೆ. ಈ ಅವತಾರಪುರುಷರ ದಿವ್ಯ ಜನ್ಮ ಕರ್ಮಗಳ ಒಂದು ಪಕ್ಷಿನೋಟವನ್ನು ಮತ್ತು ಆಧುನಿಕ ಸಂದರ್ಭದಲ್ಲಿ ಅವುಗಳ ಪ್ರಸ್ತುತತೆಯ ವಿಶ್ಲೇಷಣೆಯನ್ನು ಈ ಲೇಖನದಲ್ಲಿ ಕಾಣಬಹುದು. ಮಾನ್ಯ ಲೇಖಕರು ಕನ್ನಡದ ಪ್ರತಿಷ್ಠಿತ ಪತ್ರಿಕೆ 'ಉತ್ಥಾನ' ದ ಗೌರವ ಸಂಪಾದಕರು. ಕನ್ನಡದ ಹಿರಿಯ ಸಾಹಿತಿಗಳಾದ ಇವರ ಬರಹಗಳು ಮೌಲಿಕ ಚಿಂತನೆಯಿಂದಲೂ ಸಾಮಾಜಿಕ ಕಳಕಳಿಯಿಂದಲೂ ಕೂಡಿರುತ್ತವೆ. ಹಾಗೆಯೇ ಅವು ಮಾಹಿತಿಗಳ ಗಣಿಗಳು ಕೂಡ. ಅವರು ೨೦೦೯ ನೆಯ ಇಸವಿಯಲ್ಲಿ ಶ್ರೀರಾಮಕೃಷ್ಣ ಜಯಂತಿಯಂದು ಬೆಂಗಳೂರು ಆಕಾಶವಾಣಿಯಲ್ಲಿ ಮಾಡಿದ ಪ್ರಸಾರ ಭಾಷಣ ಇದು.

ಈ ವರ್ಷ ಎಂದರೆ ೨೦೧೦ ರಲ್ಲಿ ಶ್ರೀರಾಮಕೃಷ್ಣ ಪರಮಹಂಸರ ೧೭೫ ನೇ ವರ್ಷದ ಜಯಂತಿಯ ಆಚರಣೆ ನಡೆಯುತ್ತಿದೆ. ಅವರ ಜನನವಾದದ್ದು ೧೮೩೬ರ ಫೆಬ್ರವರಿ ೧೮ ರಂದು. ಅವರ ಮಹಾಸಮಾಧಿಯಾದದ್ದು ಈಗ್ಗೆ ೧೨೪ ವರ್ಷಗಳ ಹಿಂದೆ ೧೮೮೬ ರ ಆಗಸ್ಟ್ ೧೬ ರಂದು. ಶ್ರೀರಾಮಕೃಷ್ಣ ಪರಮಹಂಸರ ಕರಕಮಲಸಂಜಾತರಾದ ಸ್ವಾಮಿ ವಿವೇಕಾನಂದರು ಗುರುಬಂಧುಗಳೊಡಗೂಡಿ ರಾಮಕೃಷ್ಣ ಮಹಾಸಂಘವನ್ನು ಸ್ಥಾಪಿಸಿದುದು ೧೮೮೬ ರಲ್ಲಿ.

'ಗದಾಧರ'ನಾಗಿ ಜನ್ಮತಳೆದ ಶ್ರೀರಾಮಕೃಷ್ಣರು ತಮ್ಮ ಏಳನೆಯ ವಯಸ್ಸಿನಲ್ಲಿಯೆ (೧೮೪೩) ಮೊದಲ ಅಲೌಕಿಕ ಅನುಭವ ಪಡೆದದ್ದು, ಇಪ್ಪತ್ತನೇ ವಯಸ್ಸಿನಲ್ಲಿ (೧೮೫೬) ಕೊಲ್ಕತಾದ ದಕ್ಷಿಣೇಶ್ವರದಲ್ಲಿಯ ಕಾಳೀ ದೇವಾಲಯದಲ್ಲಿ ಅರ್ಚಕರಾದದ್ದು ಹಾಗೂ ಕಾಳೀಮಾತೆಯನ್ನು ಸಾಕ್ಷಾತ್ಕರಿಸಿಕೊಂಡದ್ದು, ಐದು ವರ್ಷದ ಶಾರದಾಮಾತೆಯನ್ನು ವಿವಾಹವಾದದ್ದು (೧೮೫೯), ಇಪ್ಪತ್ತೈದರಿಂದ ಇಪ್ಪತ್ತೇಳರ ವಯಸ್ಸಿನಲ್ಲಿ ಭೈರವೀ ಬ್ರಾಹ್ಮಣಿಯ ಮಾರ್ಗದರ್ಶನದಲ್ಲಿ ತಾಂತ್ರಿಕ ಸಾಧನೆ ಮಾಡಿದ್ದು (೧೮೬೧–೧೮೬೩), ಯೋಗ–ಧ್ಯಾನ ಸಾಧನೆ ಹಾಗೂ ಗುರು ತೋತಾಪುರಿಯಿಂದ ದೀಕ್ಷೆ ಪಡೆದದ್ದು(೧೮೬೪), ಮೂರು ವರ್ಷ ತೀರ್ಥಕ್ಷೇತ್ರ ಪರ್ಯಟನೆ ಮಾಡಿದ್ದು (೧೮೬೮–೧೮೭೦), ಸಿದ್ಧಪುರುಷರಾಗಿ ಪ್ರಸಿದ್ಧರಾಗಿದ್ದು ಹಾಗೂ ವಿವೇಕಾನಂದರೇ ಮೊದಲಾದ ಶಿಷ್ಯ ಪ್ರಮುಖರ ಸಮಾಗಮ (೧೮೭೯–೧೮೮೩), ೫೧ ನೇ ವಯಸ್ಸಿನಲ್ಲಿ (೧೬ ಆಗಸ್ಟ್ ೧೮೮೬) ಮಹಾಸಮಾಧಿ – ಈ ಬಾಹ್ಯಸಂಗತಿಗಳೆಲ್ಲ ಸರ್ವವಿದಿತವೇ ಆಗಿವೆ. ಅವರ ಜಯಂತಿಯ ಈ ಪುಣ್ಯಪರ್ವದಲ್ಲಿ ಅವರ ಅವತಾರಕಾರ್ಯದ ಮತ್ತು ವಾರಸಿಕೆಯ ಕೆಲವು ವೈಶಿಷ್ಟ್ಯಗಳನ್ನು ಮೆಲುಕು ಹಾಕುವುದು ಸಂಗತವಾಗಿದೆ.

ಕೆಲವು ಸನ್ನಿವೇಶಘಟಿತ ಆಂದೋಲನಗಳು ಅವು ನಡೆದ ಕಾಲದಲ್ಲಿ ಮಾತ್ರ ಮಹತ್ತ್ವದ್ದೆನಿಸುತ್ತವೆ. ಆದರೆ ಇನ್ನು ಕೆಲವು ಆಂದೋಲನಗಳು ದೇಶಕಾಲಾತೀತವಾಗಿದ್ದು ಸಮಾಜದ ಮೇಲೆ ಸ್ಥಾಯಿಯಾದ ಪ್ರಭಾವಮುದ್ರೆಯನ್ನು ಒತ್ತುತ್ತವೆ. ಶ್ರೀರಾಮಕೃಷ್ಣ ಪರಮಹಂಸರು ಉಳಿಸಿಹೋದ ವಾರಸಿಕೆ ಇಂಥದು. ಅವರು ಕೈವಲ್ಯವನ್ನಡರಿದ ಒಂದೂ ಕಾಲು ಶತಮಾನದ ತರುವಾಯವೂ ಅವರ ಪ್ರಭಾವಲಯ ಉಳಿದಿರುವುದು ಮಾತ್ರವಲ್ಲದೆ ಹೆಚ್ಚುಹೆಚ್ಚು ವಿಸ್ತಾರಗೊಳ್ಳುತ್ತಿದೆ. ಶ್ರೀರಾಮಕೃಷ್ಣರು ನಿರ್ಮಿಸಿದ ಆಧ್ಯಾತ್ಮಿಕ, ಸಾಮಾಜಿಕ ಜಾಗೃತಿ ಒಮ್ಮೆ ನಡೆದು, ಮುಗಿದುಹೋದ ಘಟನೆಯಲ್ಲ. ಅದು ನಿರಂತರವಾಗಿ ಮುಂದುವರಿದಿರುವಂಥದು. ಈ ಭೂಮಿಕೆಯಲ್ಲಿಯೂ ಅವರು ಒಬ್ಬ ಅವತಾರಪುರುಷರು.

ಅವತಾರಪುರುಷರೆನಿಸುವುದು ಕೇವಲ ಸಿದ್ಧಿ–ಪ್ರಸಿದ್ಧಿಯ ವಿಷಯವಲ್ಲ. ಅದರೊಡಗೂಡಿ ತುಂಬಾ ದೊಡ್ಡ ಹೊಣೆಗಾರಿಕೆ ಕೂಡ ಇರುತ್ತದೆ. "ನನಗೆ ಮೂರು ಲೋಕಗಳಲ್ಲೂ ಆಗಬೇಕಾದದ್ದೇನಿಲ್ಲ, ಆದರೂ ನಾನು ಸತತ ಕ್ರಿಯಾಶೀಲನಾಗಿದ್ದೇನೆ" ಎಂದು ಶ್ರೀಕೃಷ್ಣನೇ ಭಗವದ್ಗೀತೆಯಲ್ಲಿ ಹೇಳುತ್ತಾನೆ. ಇದನ್ನೇ 'ಲೋಕಸಂಗ್ರಹ' ಎನ್ನುವುದು. ಹೀಗೆ ಅವತಾರಪುರುಷರು ವರ್ತಮಾನದ ಹಾಗೂ ಭವಿಷ್ಯದ ಹೊರೆಯನ್ನು ಸ್ವೀಕರಿಸಿರುತ್ತಾರೆ.

ಯಾವುದೇ ಆಚರಣೆಯ ವಿಧಾನವಾಗಲಿ, ಸಮಾಜರೂಢಿಯಾಗಲಿ ಕಾಲಕ್ರಮದಲ್ಲಿ ಅದರ ಅಂತಸ್ಸತ್ತ್ವವನ್ನು ಕಳೆದುಕೊಂಡು ಯಾಂತ್ರಿಕಗೊಳ್ಳುವ ಅಪಾಯ ತಪ್ಪಿದ್ದಲ್ಲ. ಮೂಲದಲ್ಲಿ ಎಷ್ಟೇ ಉದಾತ್ತರೂಪದ್ದಾದರೂ ಕಾಲ ಕಳೆದಂತೆ ಅದರ ಚೈತನ್ಯಶೀಲತೆ ಕುಗ್ಗಿ, ಬಾಹ್ಯ ಆಕೃತಿಯಷ್ಟೆ ಪ್ರಾಧಾನ್ಯ ಪಡೆದುಕೊಳ್ಳುತ್ತದೆ. ಈ ಕಾರಣದಿಂದ ಅದರ ನವೀಕರಣದ ಅಗತ್ಯ ಬೀಳುತ್ತದೆ; ಬೀಜರೂಪದಲ್ಲಿರುವ ಅದರ ಕೇಂದ್ರತತ್ತ್ವದ ಪುನಃಸ್ಥಾಪನೆಯಾಗಬೇಕಾಗುತ್ತದೆ. ಇದು ನಡೆದಾಗ ಇಡೀ ಸಮಾಜದಲ್ಲಿ ಒಂದು ಹೊಸ ಜಾಗೃತಿ ಮೂಡುತ್ತದೆ, ಹೊಸ ಚೇತರಿಕೆಯುಂಟಾಗುತ್ತದೆ. ಹಲವೊಮ್ಮೆ ಈ ಪುನರ್ಜಾಗರಣ ಪ್ರಕ್ರಿಯೆ ಎಷ್ಟು ಪ್ರಜ್ವಲವಾಗಿರುತ್ತದೆಂದರೆ ಆ ಕಾಲಖಂಡವನ್ನು ಆ ದೇಶದ ಇತಿಹಾಸದ ಒಂದು ನವೋತ್ಥಾನ ಪರ್ವವೆಂದು ಗುರುತಿಸಲಾಗುತ್ತದೆ.

ಭಾರತದ ಈಚಿನ ಇತಿಹಾಸಕ್ಕೆ ಇಂಥ ಒಂದು ನಿರ್ಣಾಯಕ ತಿರುವನ್ನಿತ್ತ ಕಾರಣದಿಂದ ಶ್ರೀರಾಮಕೃಷ್ಣ ಪರಮಹಂಸರು ಓರ್ವ ಯುಗಪುರುಷರೆನ್ನಿಸಿದ್ದಾರೆ. ಸ್ವಾಮಿ ವಿವೇಕಾನಂದರೂ ಸೇರಿದಂತೆ ಹಲವರು ಅಸಾಮಾನ್ಯ ಅಧ್ಯಾತ್ಮ ಪ್ರತಿಪಾದಕರನ್ನು ಅವರು ನಿರ್ಮಿಸಿದರು, ಪ್ರತಿಭಾವಂತ ಕವಿ–ನಾಟಕಕಾರ–



ಶ್ರೀರಾಮಕೃಷ್ಣ ಭಕ್ತಕೋಟಿ – ಒಂದು ಕಾಲ್ಪನಿಕ ಚಿತ್ರ

(ಚಿತ್ರ: ಸ್ವಾಮಿ ತದಾತ್ಮಾನಂದ)

ಪಂಡಿತರನ್ನೆಲ್ಲ ತಮ್ಮ ತೆಕ್ಕೆಗೆ ಸೆಳೆದುಕೊಂಡರು ಎಂದೆಲ್ಲ ಶ್ರೀರಾಮಕೃಷ್ಣರ ಅತಿಶಯತೆಗಳನ್ನು ಕುರಿತು ಹೇಳಬಹುದು. ಆದರೆ ಇವೆಲ್ಲವನ್ನೂ ಮೀರಿದ ಸೀಮಾತೀತ ವ್ಯಕ್ತಿ ಅವರು ಎಂಬುದೂ ಅಷ್ಟೇ ನಿಜ.

ಶ್ರೀರಾಮಕೃಷ್ಣರು ಅನುಪಮವಾದ ಅನುಯಾಯಿಗಳ ಪಡೆಯನ್ನು ನಿರ್ಮಿಸಿದರು ಮಾತ್ರವಲ್ಲ, ಕೇಶವಚಂದ್ರಸೇನ್ ಮುಂತಾದ ಧಾರ್ಮಿಕ ಕ್ಷೇತ್ರದ ಅನೇಕ ವರಿಷ್ಠರಿಗೂ ಪಥದರ್ಶನ ಮಾಡಿದರು. ಹೀಗೆ ಎಲ್ಲ ವರ್ಗಗಳ ಮೇಲೂ ಪ್ರಭಾವ ಬೀರುವುದು ಅವತಾರಪುರುಷರ ಒಂದು ವೈಶಿಷ್ಟ್ಯ.

ಅತಿಶಯ ಮಾನವಗುಣಗಳೂ ಅತಿಶಯ ದೈವೀ ಗುಣಗಳೂ ಒಬ್ಬ ವ್ಯಕ್ತಿಯಲ್ಲಿ ಏಕತ್ರಿತಗೊಂಡಿದ್ದರೆ ಅಂಥವರನ್ನು ಅವತಾರಪುರುಷರೆಂದು ಪರಿಗಣಿಸಲಾಗುತ್ತದೆ. ಅಂಥವರಿಂದ ಬಹು ವ್ಯಾಪಕವಾದ ಜನಜಾಗರಣ ಕಾರ್ಯವೂ ಧರ್ಮಸ್ಥಾಪನೆಯೂ ಆಗುತ್ತವೆ.

ಪಾರಮಾರ್ಥಿಕ ತಥ್ಯಗಳನ್ನು ಅವತಾರಪುರುಷರ ವರ್ತನೆ–ನುಡಿಗಳ ಮೂಲಕ ಹೆಚ್ಚು ಸ್ಫುಟವಾಗಿ ತಿಳಿಯಬಹುದು ಎಂದು ಶ್ರೀರಾಮಕೃಷ್ಣರೇ ಹೇಳುತ್ತಾರೆ. ಲೋಕಾತೀತ ತತ್ತ್ವದ ಅಸ್ತಿತ್ವವನ್ನೂ ಸಂಗತತೆಯನ್ನೂ ಹಾಗೂ ಆ ತತ್ತ್ವದ ಸಾಕ್ಷಾತ್ಕಾರದ ಸಾಧ್ಯತೆಯನ್ನೂ ಮಾನವತೆಗೆ ಶ್ರೀರಾಮಕೃಷ್ಣರು ಅಸಂದಿಗ್ಧವಾಗಿ ತಿಳಿಸಿಕೊಟ್ಟರಷ್ಟೇ ಅಲ್ಲ, ತಾವೇ ಅದಕ್ಕೆ ನಿದರ್ಶನಸ್ವರೂಪರೂ ಆದರು. ಇಂಥ ಸಾಕ್ಷಾತ್ಕರಣ ಹಿಂದೆ ಕುರುಕ್ಷೇತ್ರದಲ್ಲಿ ಆಗಿತ್ತು, ಬುದ್ಧಗಯೆಯಲ್ಲಿ ಆಗಿತ್ತು. ಆ ಸುದೀರ್ಘ ಪರಂಪರೆಯಷ್ಟೂ ಶ್ರೀರಾಮಕೃಷ್ಣರೊಬ್ಬರಲ್ಲಿಯೆ ಅಂತರ್ಗತವಾಗಿದ್ದುದು ಅಭೂತಪೂರ್ವ. ಅಪರಿಹಾರ್ಯವೆನಿಸುವ ಬೌದ್ಧಿಕ ಹಾಗೂ ವೈಧಾನಿಕ ಜಟಿಲತೆಗಳನ್ನು ಮಾನುಷಪ್ರಜ್ಞೆಯ ಉದಾತ್ತೀಕರಣದ ಮೂಲಕ ದಾಟಬಹುದೆಂಬುದನ್ನು ಶ್ರೀರಾಮಕೃಷ್ಣರು ಸ್ವತಸ್ಸಾಧನೆಯಿಂದಲೂ ಸ್ವಾನುಭವದಿಂದಲೂ ಲೋಕಕ್ಕೆ ಪ್ರಕಟಗೊಳಿಸಿದರು.

ಸಾಮಾನ್ಯರಿಗೆ ಒಂದು ಜೀವಿತಾವಧಿಯಲ್ಲಿ ಯಾವುದೋ ಒಂದು ಮಾರ್ಗದಲ್ಲಿ ಸಮುನ್ನತ ಸಾಧನೆ ಮಾಡುವುದೇ ದುಷ್ಕರ. ಹೀಗಿರುವಾಗ ಶ್ರೀರಾಮಕೃಷ್ಣರು ಸನಾತನ ಪರಂಪರೆಯ ಯೋಗ–ತಾಂತ್ರಿಕಾದಿ ವಿವಿಧ ಮಾರ್ಗಗಳಲ್ಲಲ್ಲದೆ ಹಲವು ಅರ್ವಾಚೀನ ಧಾರೆಗಳಲ್ಲೂ ಸಾಧನೆ ಮಾಡಿದುದು ಅಚ್ಚರಿ ಮೂಡಿಸುವ ವಿಷಯ. ಇಂಥ ನಿದರ್ಶನ ಅನ್ಯತ್ರ ದುರ್ಲಭ.

ಧಾರ್ಮಿಕ ಹಾಗೂ ಮತೀಯ ಸಾಮರಸ್ಯವನ್ನು ಕುರಿತು ಈಚಿನ ದಶಕಗಳಲ್ಲಿ ತುಂಬಾ ಪ್ರಚಾರ ನಡೆದಿದೆ. ಎಲ್ಲ ಮತಗಳೂ ಒಂದೇ ಎಂಬ ಹೇಳಿಕೆಯೂ ಪದೇ ಪದೇ ಪುನರುಚ್ಚಾರಗೊಳ್ಳುತ್ತದೆ. ಇಂಥ ಬಾಹ್ಯಸ್ತರೀಯ ಪ್ರತಿಪಾದನೆಗಳು ಶ್ರೀರಾಮಕೃಷ್ಣರ ಸಂದರ್ಭದಲ್ಲಿ ಪೂರ್ತಿ ವಿಸಂಗತವೆನಿಸುತ್ತವೆ. ಏಕೆಂದರೆ ಅವರು ಎಲ್ಲ ಬೋಧೆಗಳನ್ನೂ ಸ್ವಾನುಭವದ ನಿಕಷಕ್ಕೆ ಒಡ್ಡಿ ರುಜುವಾತುಪಡಿಸಿದರು. ಪಂಥಬಾಹುಳ್ಯ ಅವರಿಗೆ ಸಮಸ್ಯೆಯೆನಿಸದೆ ಸಂಭ್ರಮಾರ್ಹವಾಗಿದ್ದಿತು. ಭಗವಂತನ ಲೀಲಾವಿಭೂತಿಗಳಲ್ಲದೆ ಬೇರೇನೂ ಜಗತ್ತಿನಲ್ಲಿ ಅವರಿಗೆ ಗೋಚರಿಸಲೇ ಇಲ್ಲ. ಹೀಗೆ ಅವರು ಅನುಭವದ ಮತ್ತು ಪ್ರಜ್ಞೆಯ ನೆಲೆಗಟ್ಟಿನಲ್ಲಿ ಎಲ್ಲ ಮತ–ಪಂಥಗಳಿಗೂ ಸ್ವೀಕಾರ್ಯತೆಯನ್ನೂ ಘನತೆಯನ್ನೂ ತಂದುಕೊಟ್ಟರು. ಅವರು ಗಳಿಸಿಕೊಂಡ ವ್ಯಾಪಕ ಸ್ಪಂದನಕ್ಕೆ ಇದೂ ಒಂದು ಪ್ರಮುಖ ಕಾರಣವೆನ್ನಬಹುದು. ತುಮುಲ ತುಂಬಿದ ಈ ಯುಗದಲ್ಲಿ ಶ್ರೀರಾಮಕೃಷ್ಣರು ಪ್ರಚುರಗೊಳಿಸಿದ ಸಮನ್ವಯದೃಷ್ಟಿಯ ಅಗತ್ಯ ತೀವ್ರವಾಗಿತ್ತು. ಹೀಗೆ ಸನಾತನಧರ್ಮದ ದೃಢೀಕರಣ, ನೈಜಧರ್ಮದ ಸಾರ್ವತ್ರಿಕತೆಯ ಹೊಸ ನಿರ್ವಚನ – ಈ ಎರಡನ್ನೂ ಅವರು ಸಾಧಿಸಿದರು. ಧರ್ಮವೆಂಬುದು ಕೇವಲ

ಆಚಾರಸಂಹಿತೆಯಲ್ಲ, ಅದು ಪುರುಷಾರ್ಥಾನುಸಂಧಾನ ಎಂಬುದು ಶ್ರೀರಾಮಕೃಷ್ಣರಿತ್ತ ದರ್ಶನದ ಸಾರಭಾಗ.

ನಮ್ಮ ಪರಂಪರೆಯಲ್ಲಿ ಆಗಿಹೋದ ಅಸಂಖ್ಯ ಸಂತರ ಅಲೌಕಿಕ ಅನುಭವಗಳು ಶ್ರೀರಾಮಕೃಷ್ಣರಲ್ಲಿ ಏಕೀಭವಿಸಿ ನವ್ಯತೆಯನ್ನು ಪಡೆದವು ಎಂದಿದ್ದಾರೆ ಶ್ರೀಅರವಿಂದರು. ಆದಿಶಂಕರ, ಚೈತನ್ಯ ಮಹಾಪ್ರಭು ಮೊದಲಾದ ಅವತಾರ ಪುರುಷರಿಗೆ ಶಾಸ್ತ್ರಾಧ್ಯಯನದ ಹಿನ್ನೆಲೆಯಿತ್ತು. ಶ್ರೀರಾಮಕೃಷ್ಣರು ಓದು-ಬರಹಗಳ ವಿಷಯದಲ್ಲಿ ಬಹುಮಟ್ಟಿಗೆ ಅವ್ಯುತ್ಪನ್ನರೇ. ಹೀಗಿದ್ದರೂ ಅವರು ಉದ್ದಾಮ ಪಂಡಿತರೊಡನೆಯೂ ಶಾಸ್ತ್ರಚರ್ಚೆ ನಡೆಸಬಲ್ಲವರಾಗಿದ್ದರು. ಏಕೆಂದರೆ ಅವರ ಜ್ಞಾನವು ಪ್ರತ್ಯಕ್ಷಾನುಭೂತಿಯಿಂದ ಉಗಮ ಗೊಂಡಿದ್ದಾಗಿತ್ತು.

ಶ್ರೀರಾಮಕೃಷ್ಣರಂಥ ಸಿದ್ಧಪುರುಷರನ್ನು 'ಅನುಭಾವಿಗಳು' (mystics) ಎನ್ನುತ್ತಾರೆ. ಅವರದು ಮಾನಸಿಕ ಬೌದ್ಧಿಕ ಪ್ರಕ್ರಿಯೆಗಳಿಂದ ಅತೀತವಾದ ಸ್ಥಿತಿ ಎಂದರೆ ಯಾವುದೇ ಮಧ್ಯವರ್ತಿಯ ಅಗತ್ಯವಿಲ್ಲದ ಸಾಕ್ಷಾತ್ಕಾರ; ಅಹಂಕಾರವು ಸಂಪೂರ್ಣವಾಗಿ ವಿಲಯನಗೊಂಡ ಸ್ಥಿತಿ. ಸತತ ಅನುಷ್ಠಾನದ ಮೂಲಕ ಮನಸ್ಸು-ಬುದ್ಧಿಗಳು ಉದಾತ್ತಗೊಂಡಾಗ ಅನುಭಾವಸ್ಥಿತಿ ಉಂಟಾಗುತ್ತದೆ. ಅದು ಅತ್ಯಂತ ಆನಂದಮಯ ಸ್ಥಿತಿ. ಶ್ರೀರಾಮಕೃಷ್ಣರು ಅನುಭವಿಸಿದ್ದು ಇಂಥ ಸ್ಥಿತಿಯನ್ನೇ.

ವ್ಯಾವಹಾರಿಕ ರೀತಿಯ ಗ್ರಾಂಥಿಕ ಜ್ಞಾನದಲ್ಲಿ ಶ್ರೀರಾಮಕೃಷ್ಣರಿಗೆ ಆಸಕ್ತಿ ಕಡಿಮೆ. ತೋತಾಪುರಿಯೂ ಸೇರಿದಂತೆ ಹಲವು ಗುರುಗಳ ನಿಕಟ ಸಂಬಂಧ ಅವರಿಗೆ ಇದ್ದುದರಿಂದಲೂ ಅವರ ಗ್ರಹಣಶಕ್ತಿ ತೀಕ್ಷ್ಣವಾಗಿದ್ದುದರಿಂದಲೂ ಅವರಿಗೆ ಪಾರಂಪರಿಕ ಅಧ್ಯಾತ್ಮಶಾಸ್ತ್ರದ ಸ್ಥೂಲ ಪರಿಚಯ ಆಗಿಯೇ ಇತ್ತು. ಆದರೆ ಅವರು ಅದಕ್ಕಿಂತ ಹೆಚ್ಚಾಗಿ ಸಾಕ್ಷಾದನುಭವಕ್ಕೇ ಮಹತ್ತ್ವ ಕೊಟ್ಟಿದ್ದವರು. ಒಮ್ಮೆ ಪಂಡಿತರೊಬ್ಬರು 'ದೃಗ್-ದೃಶ್ಯ ವಿವೇಕ' ಎಂದರೆ ಜ್ಞಾತೃ-ಜ್ಞೇಯ ವಿವೇಕದ ಕುರಿತು ಪ್ರಶ್ನಿಸಿದಾಗ ಶ್ರೀರಾಮಕೃಷ್ಣರು ಹೇಳಿದರು, "ನನಗೆ ಅದೆಲ್ಲ ತಿಳಿಯದು. ನನ್ನ ಅಂತರಾತ್ಮ ಮತ್ತು ಜಗನ್ಮಾತೆ ಒಂದೇ ಎಂದಷ್ಟೆ ನಾನು ಬಲ್ಲೆ." ಸಾಕ್ಷಾದನುಭವದ ಎದುರು ವಾದಜಿಜ್ಞಾಸೆ ಹಿಂದೆ ಸರಿಯಲೇಬೇಕಾಗುತ್ತದೆ. ಹೀಗೆಂದು ಶ್ರೀರಾಮಕೃಷ್ಣರು ಶಾಸ್ತ್ರಜ್ಞಾನದ ಬಗ್ಗೆ ಅಸಡ್ಡೆ ತೋರಿದವರಲ್ಲ; ಶಾಸ್ತ್ರಜ್ಞಾನವನ್ನು ಅವರು ತುಂಬ ಗೌರವಿಸುತ್ತಿದ್ದರು.

ಓರ್ವ ವ್ಯಕ್ತಿಯು ಹೆಚ್ಚು ಹೆಚ್ಚು ಪ್ರಬುದ್ಧನಾದಂತೆ ಅವನ ನಡೆ-ನುಡಿ ಸರಳವಾಗುತ್ತದೆ. ಏಕೆಂದರೆ ಅನವಶ್ಯಕ ಸಂಗತಿಗಳ ರಾಶಿಯಿಂದ ಅವನ ಅಂತರಂಗ ದೂರ ಸರಿದಿರುತ್ತದೆ. ಶ್ರೀರಾಮಕೃಷ್ಣರು ನೀಡಿದ ಹೆಚ್ಚಿನ ಉಪದೇಶಗಳು ದೃಷ್ಟಾಂತದಿಂದ ಕೂಡಿರುತ್ತಿದ್ದವೇ ಹೊರತು ಪಾರಿಭಾಷಿಕವಾಗಿರುತ್ತಿರಲಿಲ್ಲ. ಒಬ್ಬಾತನಿಗೆ ನಡುರಾತ್ರಿಯಲ್ಲಿ ತಂಬಾಕು ಹೊತ್ತಿಸಲು ಬೆಂಕಿ ಬೇಕಾಯಿತು. ಚಟ ತಡೆದುಕೊಳ್ಳಲಾಗದೆ ಅವನು ಪಕ್ಕದ ಮನೆಗೆ ಹೋಗಿ ಬೆಂಕಿ ಕೇಳಿದನಂತೆ. ಪಕ್ಕದ ಮನೆಯಾತ, "ನಿನ್ನ ಕೈಯಲ್ಲಿಯೆ ಕಂದೀಲು ದೀಪ ಇದೆಯಲ್ಲಯ್ಯ!" ಎಂದನಂತೆ. ಜ್ಞಾನ ನಮ್ಮಲ್ಲಿ ಅಂತಸ್ಥವಾಗಿದ್ದರೂ ನಾವು ಅದನ್ನು ಎಲ್ಲೆಲ್ಲಿಯೋ ಹುಡುಕುತ್ತಿರುತ್ತೇವೆ. ಜ್ಞಾನಪ್ರಾಪ್ತಿಯೆಂದರೆ ಅಜ್ಞಾನನಿವಾರಣೆಯಷ್ಟೇ ಎಂಬುದನ್ನು ಶ್ರೀರಾಮಕೃಷ್ಣರು ಇಂಥ ಸುಲಭಗ್ರಾಹ್ಯ ನಿದರ್ಶನಗಳ ಮೂಲಕ ನಮಗೆ ಮನವರಿಕೆ ಮಾಡಿಕೊಡುತ್ತಾರೆ.

> **ಉಪನಿಷತ್ತುಗಳ ನಿರ್ಮಲವಾದ ಮೂಲದಿಂದ ಹೊರಟ ಸನಾತನ ಧರ್ಮವು ದೇಶದ ಎಲ್ಲಾ ಮಟ್ಟದ ಮತಾಚಾರವನ್ನು ಒಳಗೊಳ್ಳುವ ಪ್ರಯತ್ನದಲ್ಲಿ ಬಯಲಲ್ಲಿ ಹರಿಯುವ ನದಿಯಂತೆ ಆಯಿತು; ಧರ್ಮದ ತತ್ತ್ವಗಳನ್ನು ಸಾಮಾನ್ಯ ಜನಕ್ಕೆ ತಿಳಿಸುವುದಕ್ಕಾಗಿ ಪುರಾಣವನ್ನು ನಿರ್ಮಿಸುವಲ್ಲಿ, ಕಲ್ಪನೆಯ ಸಂಗತಿಗಳನ್ನು ಇತಿಹಾಸ ಮಾಡಿ, ಕಥೆ ಯಾವುದು, ಚರಿತ್ರೆ ಯಾವುದು ಎಂದು ತಿಳಿಯದೆ ಹೋಯಿತು. ಸಮಾಜದ ನೇತಾರರು ಹತ್ತುಮುಖವಾಗಿ ನಡೆಯುತ್ತಿರಲು ದಾರಿ ಯಾವುದೆಂದು ಕಾಣದೆ ದೇಶವು ತೊಳಲುತ್ತಿತ್ತು. ಆ ತೊಳಲಿಕೆ ಈಗಲೂ ಹೋಗಿಲ್ಲ. ಆದರೆ ಆಗ ಅದು ಬಹಳ ಪ್ರಬಲವಾಗಿತ್ತು. ಹೀಗೆ ಕ್ಷೋಭೆಯಲ್ಲಿದ್ದ ದೇಶಕ್ಕೆ ಶ್ರೀರಾಮಕೃಷ್ಣರ ಸಾಧನೆಯಿಂದ ಮತ್ತು ಉಪದೇಶದಿಂದ ಆಗಬೇಕಾದ ಚಿಕಿತ್ಸೆ ಬಹಳ ಅವಶ್ಯವಿತ್ತು.**
>
> – ಮಾಸ್ತಿ ವೆಂಕಟೇಶ ಅಯ್ಯಂಗಾರ್
>
> (ಆಧಾರ: ಶ್ರೀರಾಮಕೃಷ್ಣ, ಪ್ರಕಟಣೆಯ ವರ್ಷ: ೧೯೩೬)

ಈಶ್ವರಚಂದ್ರ ವಿದ್ಯಾಸಾಗರ, ಶಶಧರ ತರ್ಕಚೂಡಾಮಣಿ, ಆಧುನಿಕ ವಿಜ್ಞಾನ ಕ್ಷೇತ್ರದಲ್ಲಿ ಭಾರತದ ಸಾಧನೆಗೆ ಅಡಿಪಾಯ ಹಾಕಿದ ಮಹೇಂದ್ರಲಾಲ ಸರ್ಕಾರ್ ಮೊದಲಾದ ಧೀಮಂತರೆಲ್ಲ ಶ್ರೀರಾಮಕೃಷ್ಣರ ಮುಂದೆ ನತಮಸ್ತಕರಾದರು. ಕುವೆಂಪು ಹೇಳುವಂತೆ, "ಶ್ರೀರಾಮಕೃಷ್ಣರು ಸರ್ವಮತ ಸಿದ್ಧಾಂತಗಳನ್ನೂ ಸಾಧನೆಯ ಶಾಲೆಯಲ್ಲಿ, ಅಸಮ ಸಾಹಸದಿಂದಲೂ ವಿಶಾಲ ಹೃದಯದಿಂದಲೂ, ಪರೀಕ್ಷಿಸಿ ಸಮನ್ವಯ ತತ್ತ್ವಸಿದ್ಧರಾದರು."

ಈಗ ಎಂದರೆ ಇಪ್ಪತ್ತೊಂದನೇ ಶತಮಾನದಲ್ಲಿ, ಬದಲಾದ ಜೀವನ ರೀತಿಗಳಿಂದಾಗಿ ಸಾತ್ತ್ವಿಕ ಸ್ವಭಾವದವರಲ್ಲಿಯೂ ಕೆಲವು ಮಾನಸಿಕ ಗೊಂದಲಗಳು ಉಂಟಾಗುವ ಸನ್ನಿವೇಶ ಇದೆ. ಈ ಪರಿಸ್ಥಿತಿಯಲ್ಲಿ ದೃಢವಾದ ದಿಗ್ದರ್ಶನ ಮಾಡಿ ಮನಸ್ಸಿಗೆ ಸಾಂತ್ವನವನ್ನು ನೀಡುವ, ಆದರೆ ಕ್ಲಿಷ್ಟವೆನಿಸದ ಸ್ನೇಹಪೂರ್ಣ ಬೋಧೆಯ ಅಗತ್ಯವಿದೆ. ಅಂಥ ಬೋಧನೆ ಲಭ್ಯವಿರುವುದು ಶ್ರೀರಾಮಕೃಷ್ಣರ ವಾಣಿಯಲ್ಲಿ ಮಾತ್ರ.

"ಪೂರ್ವಿಕರು ಹೇಳಿದರೆಂದು ಯಾವುದನ್ನೂ ಯಥೋಕ್ತವಾಗಿ ಸ್ವೀಕರಿಸಬೇಡ, ಎಲ್ಲವನ್ನು ಸಾಕ್ಷಾತ್ಕಾರದಿಂದ ಪ್ರಮಾಣಿಸಿಕೋ" ಎಂಬ ಶ್ರೀರಾಮಕೃಷ್ಣರ ಮಾತಿಗಿಂತ

ಹೆಚ್ಚು ವೈಜ್ಞಾನಿಕ ದರ್ಶನ ಬೇರೆ ಯಾವುದಿದ್ದೀತು? ತಾವು ಹೇಳುವುದನ್ನೆಲ್ಲ ವಿಮರ್ಶೆಯಿಲ್ಲದೆ ಸ್ವೀಕರಿಸಬೇಕೆಂದು ಶ್ರೀರಾಮಕೃಷ್ಣರು ಎಂದೂ ಬಯಸಲಿಲ್ಲ. ಪ್ರತಿಯಾಗಿ, ಹೇಳಿದ್ದಕ್ಕೆಲ್ಲ ಹೂಂಗುಟ್ಟುವ ಪ್ರವೃತ್ತಿಯನ್ನು ಅವರು ಟೀಕಿಸುತ್ತಿದ್ದರು, ಪರಿಹಾಸ ಮಾಡುತ್ತಿದ್ದರು; ತಮ್ಮನ್ನು ಪರೀಕ್ಷಿಸುವಂತೆ ಶಿಷ್ಯರಿಗೆ ಕರೆ ನೀಡುತ್ತಿದ್ದರು. ಮುಂದೆ ವಿವೇಕಾನಂದರೆನಿಸಿದ ನರೇಂದ್ರ ತಮ್ಮನ್ನು ಹಾಗೆ ಪರೀಕ್ಷಿಸುತ್ತಿದ್ದುದರಿಂದ ಶ್ರೀರಾಮಕೃಷ್ಣರು ಆನಂದಗೊಂಡರು. ವೈಚಾರಿಕತೆಯಿಂದ ವಿಮುಖರಲ್ಲದ ಕಾರಣದಿಂದ ಶ್ರೀರಾಮಕೃಷ್ಣರಿಗೆ ಭೌತವಿಜ್ಞಾನದ ಅನಿವಾರ್ಯತೆಯನ್ನು ಗ್ರಹಿಸಿ ಅಳವಡಿಸಿಕೊಳ್ಳುವುದು ದುಷ್ಕರವಾಗಲಿಲ್ಲ. ಹೀಗಿದ್ದುದರಿಂದ ಅಧ್ಯಾತ್ಮಸಾಧನೆಗೂ ಅವರು ವೈಜ್ಞಾನಿಕ ಮಾರ್ಗವನ್ನು ಸೂಚಿಸಿದರು. ಸ್ವಾಮಿ ವಿವೇಕಾನಂದರು ಅದೇ ದೃಷ್ಟಿಯನ್ನು ಇನ್ನಷ್ಟು ಪರಿಷ್ಕಾರಗೊಳಿಸಿ ವ್ಯಾಖ್ಯಾನ ಮಾಡಿದರು.

**ಹೀಗೆ ಪ್ರಾಚೀನ ಯುಗ, ಆಧುನಿಕ ಯುಗ – ಎರಡಕ್ಕೂ ಸುಸಂಗತವಾಗುವ ಕಾರಣದಿಂದ ಶ್ರೀರಾಮಕೃಷ್ಣರ ವ್ಯಕ್ತಿತ್ವ ಮತ್ತು ದರ್ಶನಗಳು ಭಾರತಕ್ಕೆ ಆದರ್ಶವಾಗಲರ್ಹವಾದುವು ಎಂದಿದ್ದಾರೆ ಸ್ವಾಮಿ ವಿವೇಕಾನಂದರು.**

ಶ್ರೀರಾಮಕೃಷ್ಣರ ದರ್ಶನದ ಅನನ್ಯತೆ ಹಲವಾರು ವಿವರಾಂಶಗಳಲ್ಲಿಯೂ ಎದ್ದು ತೋರುತ್ತದೆ. ಉದಾಹರಣೆಗೆ ಕರ್ಮಾಚರಣೆಯು ಚಿತ್ತಶುದ್ಧಿಗೆ ದಾರಿಮಾಡುತ್ತದೆಂಬುದು ಪಾರಂಪರಿಕ ಬೋಧೆ. ಕರ್ಮವನ್ನು ಭಕ್ತಿಗೆ ಸಾಧನವನ್ನಾಗಿ ಮಾಡಿಕೊಳ್ಳಬೇಕೆಂಬುದಕ್ಕೆ ಮಹತ್ತ್ವ ನೀಡಿದವರು ಶ್ರೀರಾಮಕೃಷ್ಣರು.

ಮಾನವ ಸೇವೆಗೆ ಶ್ರೀರಾಮಕೃಷ್ಣರು ನೀಡಿದ ಪ್ರಾಮುಖ್ಯವೂ ಆಧ್ಯಾತ್ಮಿಕ ಆಧಾರದ್ದೇ ಹೊರತು ಕೇವಲ ಸಾಮಾಜಿಕ ಸ್ತರದ್ದಲ್ಲ: **"ಶಿವಜ್ಞಾನೇ ಜೀವಸೇವಾ"** – ಶಿವಭಾವದಿಂದ ಜೀವರ ಸೇವೆ ಮಾಡಬೇಕು ಎನ್ನುವುದು ಅವರ ಒಂದು ಪ್ರಮುಖ ಬೋಧನೆ. ದೈವಶ್ರದ್ಧೆಯಿಂದ ವಿಮುಖರಾದವರೂ ಸೇವಾಪ್ರಯತ್ನಗಳನ್ನು ಮಾಡುವುದುಂಟು. ಆದರೆ ದೈವಭಕ್ತಿಯ ಅನುಷ್ಠಾನ ರೂಪವಾಗಿಯೆ ಮಾನವಸೇವೆ ನಡೆಯಬೇಕೆಂಬುದು ಶ್ರೀರಾಮಕೃಷ್ಣರ ನಿರ್ದೇಶನ. ಈ ಮಾರ್ಗದಲ್ಲಿ ಕರ್ಮ, ಭಕ್ತಿ, ಜ್ಞಾನಗಳ ಸುಂದರ ಸಮನ್ವಯ ಸಿದ್ಧಿಸುತ್ತದೆ ಎಂದು ಸ್ವಾಮಿ ವಿವೇಕಾನಂದರು ಸ್ಫುಟಪಡಿಸಿದ್ದಾರೆ. ಸೇವೆಯನ್ನು ಕುರಿತು ಶ್ರೀರಾಮಕೃಷ್ಣರು ನೀಡಿದ ಈ ಕಲ್ಪನೆ ಆಧುನಿಕ ಕಾಲಕ್ಕೆ ಅತ್ಯಂತ ಸಮರ್ಪಕವಾಗಿ ಹೊಂದಿಕೆಯಾಗುವಂಥದು.

ಸದಾ ಸಮಾಧಿಸ್ಥಿತಿಯಲ್ಲಿರಬೇಕೆಂಬ ಇಚ್ಛೆಯನ್ನು ನರೇಂದ್ರ ವ್ಯಕ್ತಪಡಿಸಿದಾಗ ಶ್ರೀರಾಮಕೃಷ್ಣರು ಅವನನ್ನು ಛೇಡಿಸಿ ಅಂತಹ ಸ್ವಾರ್ಥ ಸಲ್ಲದೆಂದೂ ಸಾವಿರಾರು ಜನರಿಗೆ ಸಾಂತ್ವನ ನೀಡುವುದನ್ನು ತನ್ನ ಜೀವಿತಕಾರ್ಯವಾಗಿ ಭಾವಿಸಬೇಕೆಂದೂ ಎಚ್ಚರಿಸಿದರು.

ಶ್ರೀರಾಮಕೃಷ್ಣರ ಮಾನವಾನುಕಂಪ ಮಾತಿಗೆಟುಕದಂಥದು. ತೀರ್ಥಯಾತ್ರೆಗೆಂದು ಹೊರಟವರು ಮಾರ್ಗಮಧ್ಯದಲ್ಲಿ ಒಂದು ಬಡಸಮುದಾಯದ ದೈನ್ಯಾವಸ್ಥೆಯನ್ನು ನೋಡಿ ಅವರು ವಿಚಲಿತರಾಗುತ್ತಾರೆ. ಆಮೇಲಿನ ವರ್ಷಗಳಲ್ಲಿ ಸ್ವಾಮಿ ವಿವೇಕಾನಂದರು ಮಾನವ ಸೇವೆಯೇ ಮಾಧವಸೇವೆಯೆಂದು ಉದ್ಘೋಷ ಮಾಡಿದುದರ ಮೂಲ ಪ್ರೇರಣೆಯು ಶ್ರೀರಾಮಕೃಷ್ಣರ ಈ ನಡವಳಿಕೆಯಲ್ಲಿ ಎದ್ದುಕಾಣುತ್ತದೆ.

ತಾವು ಹೊಸ ಸಂದೇಶವೇನನ್ನೋ ನೀಡುತ್ತಿರುವೆನೆಂದು ಶ್ರೀರಾಮಕೃಷ್ಣರು ಎಂದಿಗೂ ಹೇಳಲಿಲ್ಲ. ಪರಂಪರಾಪ್ರಾಪ್ತವಾದ ಸಾಧನಮಾರ್ಗದ ಹಲವು ಸಾರವತ್ತಾದ, ಆಧಾರಭೂತವಾದ ಮತ್ತು ಈ ಯುಗಕ್ಕೆ ಅತ್ಯಂತ ಸಂಗತವಾದ ಅಂಶಗಳಿಗೆ ಅವರು ಹೆಚ್ಚಿನ ಸ್ವರಭಾರ ನೀಡಿದರು. ಈ ಕಾರಣದಿಂದ ಅವರಿಗೆ ವಿಶಾಲ ಜನಸ್ಪಂದನ ದೊರೆಯಿತು. ಅಧ್ಯಾತ್ಮ ಸಾಧನೆಯೆಂದರೆ ದುರ್ಗ್ರಾಹ್ಯವಾದ ಜಟಿಲತೆಗಳಿಂದಲೂ ಕಟ್ಟುಕಟ್ಟಳೆಗಳಿಂದಲೂ ಕೂಡಿದ್ದೆಂಬ ಗಾಬರಿಯಿಂದ ಶ್ರದ್ಧಾಳುಗಳನ್ನು ಶ್ರೀರಾಮಕೃಷ್ಣರು ಮುಕ್ತಗೊಳಿಸಿದರು. ಶಾಸ್ತ್ರಾದಿಗಳ ಅಂತಿಮ ಆಶಯ ಸಾಧನಾಪ್ರಕ್ರಿಯೆಯನ್ನು ಸುಗಮಗೊಳಿಸುವುದೇ ಹೊರತು, ಜಟಿಲಗೊಳಿಸುವುದಲ್ಲ.

ಶ್ರೀರಾಮಕೃಷ್ಣರು ಭಕ್ತಿಗೆ ಪ್ರಾಶಸ್ತ್ಯ ಕೊಟ್ಟದ್ದೂ ಆಕಸ್ಮಿಕವೇನಲ್ಲ. ಕಲಿಯುಗದ ಸನ್ನಿವೇಶದಲ್ಲಿ ನಾರದಪ್ರಣೀತ ಭಕ್ತಿಯ ಅನುಸಂಧಾನವೇ ಶ್ರೇಷ್ಠ ಸಾಧನೋಪಾಯವೆಂದು ಶಿಷ್ಟ ಸಂಪ್ರದಾಯದ ಹೇಳಿಕೆಯಿದೆ.

ಶ್ರದ್ಧೆಯನ್ನು ಬಿಟ್ಟು ಬೇರಾವುದನ್ನೂ ಶ್ರೀರಾಮಕೃಷ್ಣರು ಪುರಸ್ಕರಿಸಲಿಲ್ಲ. ಶ್ರದ್ಧೆ ಕಂಡಾಗ ದೇವಸ್ಥಾನದಲ್ಲಿ ಕಸ ಗುಡಿಸುತ್ತಿದ್ದವನನ್ನೂ ಶ್ರೀರಾಮಕೃಷ್ಣರು ಅನುಗ್ರಹಿಸಿದ ನಿದರ್ಶನ ಇದೆ.

ಹೀಗೆ ಶ್ರೀರಾಮಕೃಷ್ಣ ಪರಮಹಂಸರು ಆಧುನಿಕ ಭಾರತದ ಇತಿಹಾಸಕ್ಕೆ ನಿರ್ಣಾಯಕ ತಿರುವನ್ನಿತ್ತ ಸೀಮಾಪುರುಷರು ಎನಿಸಿದುದಕ್ಕೆ ಒಂದು ಕಾರಣ ಅವರ ಅಧ್ಯಾತ್ಮಸಿದ್ಧಿಯ ಪ್ರಜ್ವಲತೆ. ಇನ್ನೊಂದು ಕಾರಣ, ಇಂಥ ಅವತಾರಪುರುಷರ ಬರುವಿಗಾಗಿ ಜಗತ್ತು ಕಾತರಿಸುತ್ತಿತ್ತೆಂಬುದು.

ಮಹಾತ್ಮರು ಜಗತ್ತಿನ ಮೇಲೆ ಬೀರುವ ಪ್ರಭಾವ ವ್ಯಾಪಕವೂ ಚಿರಕಾಲಿಕವೂ ಆಗುತ್ತದೆ. ಇಂಥ ಅತಿಶಯ ವರ್ಗಕ್ಕೆ ಸೇರಿದವರು ಭಗವಾನ್ ಶ್ರೀರಾಮಕೃಷ್ಣ ಪರಮಹಂಸರು. ಅವರ ಜನ್ಮದಿನವಾದ ಇಂದು ಅವರ ಸ್ಮರಣೆ ಪುಣ್ಯಪ್ರದ.

**(ಕೃಪೆ : ಆಕಾಶವಾಣಿ)**